VIJAYAKUMAR KANNUR
Digitally signed by VIJAYAKUMAR KANNUR
Date: 2026.02.25 16:27:09 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 25.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ವಿ ಕೆ ವಕೀಲರಿಂದ :**

ಸರ್ವೇ ನಂಬರ್ 199 ರ ಜಮೀನಿನ ಒಟ್ಟು ವಿಸ್ತೀರ್ಣ 2 ಎಕರೆ 30 ಗುಂಟೆ ಇರುವುದು. ನಿಪಿ 1 ರ ದಾಖಲೆಯ ಪ್ರಕಾರ 3 ಗುಂಟೆಯ ಜಮೀನು ಸೋನುಬಾಯಿಯ ಹೆಸರು ಅದರಲ್ಲಿ ನಮೂದು ಮಾಡಿರುವರು ಎಂದರೆ ಸರಿ, ಆದರೆ ಅದು ನಿಜವಿರುವುದಿಲ್ಲ. ನನಗೆ ನನ್ನ ಗಂಡ ಹಾಗೂ ನನ್ನ ಅಳಿಯ ನೀಡಿರುವಂತಹ ದಾಖಲೆಗಳ ಪ್ರಕಾರ ಅವರ ಹೆಸರಿನಲ್ಲಿ 34 ಗುಂಟೆ ಜಮೀನು ಇರುವುದರಿಂದ ಆ ಕಾರಣಕ್ಕೆ ಈ ದಾಖಲೆಯಲ್ಲಿನ ಸಂಗತಿ ನಿಜವಿರುವುದಿಲ್ಲ ಎಂದು ನಾನು ಸಾಕ್ಷಿ ನುಡಿಯುತ್ತಿರುವೆನು. ಈ ದಾವಾ ಆಸ್ತಿಯ 3 ಗುಂಟೆಯ ಜಮೀನಿನ ಮಾಲೀಕ ವಾದಿಯಾಗಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಾದಿಯೇ ದಾವಾ ಆಸ್ತಿಯ ಕಬ್ಜೆಯಲ್ಲಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು.

2. ವಾದ ಪತ್ರದಲ್ಲಿ ಕಾಣಿಸಿರುವ ದಾವಾ ಆಸ್ತಿಯು ನಿಜವಿರುವುದಿಲ್ಲ, ಆದರೆ ಯಾವ ಕಾರಣಕ್ಕೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ 16 ರ ದಾಖಲೆಯ ಪ್ರಕಾರ ದಿಃ 09.08.1952 ರಿಂದ ವಾದಿಯೇ ದಾವಾ ಆಸ್ತಿಯ ಮಾಲೀಕನಾಗಿರುವನು ಎಂದರೆ ಸರಿಯಲ್ಲ. ಸರ್ವೇ ನಂಬರ್ 199 ರ ಜಮೀನಿನಲ್ಲಿ ಒಟ್ಟು ಎಷ್ಟು ಜನರ ಮಾಲೀಕರ ಹೆಸರು ದಾಖಲಿರುವವು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಹಣಮಂತ ಶೇರಖಾನೆ, ಶೇಖುಬಾಯಿ ಶೇರಖಾನೆ ಮತ್ತು ಮಲ್ಲುಬಾಯಿ ಶೇರಖಾನೆ ಎಂಬುವವರ ಹೆಸರು ದಾಖಲಿರುವವು. ಸರ್ವೇ ನಂಬರ್ 199 ರ ಪಹಣಿ ಪತ್ರಿಕೆಯಲ್ಲಿ 9 ಗುಂಟೆಯ ಜಮೀನಿನ ಆಸ್ತಿಗೆ ಪ್ರಭುಗೌಡ ಎಂಬುವವರ ಹೆಸರು ದಾಖಲಿರುವುದು ಎಂದರೆ ಸರಿ. ಅದೇ ರೀತಿ ಬಾರಕೋಲ ಎಂಬುವವರ ಹೆಸರು ಸಹ ಈ ಪಹಣಿ ಪತ್ರಿಕೆಯಲ್ಲಿ ದಾಖಲಿರುವುದು ಎಂದರೆ

ಸರಿ. ಈ ಸರ್ವೇ ನಂಬರ್ ನ ಜಮೀನಿನಲ್ಲಿನ 3 ಗುಂಟೆಯ ಜಮೀನಿಗೆ ನಾವು ಮಾಲೀಕರು ಇರುವುದಾಗಿ ಎಂದು ಹೇಳಿ ನನ್ನ ಗಂಡ ಮತ್ತು ನನ್ನ ಗಂಡನ ಸಹೋದರರು ಅರ್ಜಿ ಸಲ್ಲಿಸಿರುವರು. ಆ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವೆನೋ ಅಥವಾ ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ. ಈ ದಾವಾ ಆಸ್ತಿಯು ವಾದಿಯ ಮಾಲೀಕ್ತವದ ಆಸ್ತಿ ಎಂದು ಗೊತ್ತಿದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿವಾದ ಪತ್ರದಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ